ಅ) ಬೆಂಗಳೂರು ನಗರದಲ್ಲಿ ಶಿಕ್ಷಣ ಇಲಾಖೆಯು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಕಛೇರಿಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಎಷ್ಟು ಕಛೇರಿಯು ಬಾಡಿಗೆ ಕಟ್ಟಡದಲ್ಲಿರುತ್ತದೆ.

ಇ) ಅವುಗಳ ಬಾಡಿಗೆಗೆ ಸರ್ಕಾರಕ್ಕೆ ನೀಡುತ್ತಿರುವ ಹಣವೆಷ್ಟು?

ಈ) ಬೆಂಗಳೂರಿನ ಮೈಸೂರು ಬ್ಯಾಂಕ್ ಚೌಕದ ಬಳಿ ಇರುವ ಸೆಂಟ್ರಲ್ ಪ್ರೌಢ ಶಾಲೆ ಕಟ್ಟಡದ ಜಾಗದಲ್ಲಿ ಎಲ್ಲಾ ಶಿಕ್ಷಣ ಇಲಾಖೆಯ ಕಛೇರಿಗಳನ್ನು ಒಂದೇ ಕಡೆ ಇರುವಂತೆ ಮಾಡಲು ವಿದ್ಯಾ ಭವನ. ನಿರ್ಮಿಸುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಂಡಿದೆಯೇ?

ಉ) ಹಾಗಿದ್ದರೆ ಈ ವಿದ್ಯಾಭವನಕ್ಕೆ ತಗಲುವ ವೆಚ್ಚವೆಷ್ಟು?

ಊ) ಈ ವಿದ್ಯಾ ಭವನದ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗಿದೆ.

ಋ) ಆ ವಿದ್ಯಾ ಭವನದ ಕಟ್ಟಡ ಯಾವಾಗ ಪೂರ್ಣಗೊಳ್ಳುತ್ತದೆ.

ಋ) 1993-94ರಲ್ಲಿ ಅದಕ್ಕಾಗಿ ಒದಗಿಸಿರುವ ಹಣವೆಷ್ಟು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) 1) ಆಯುಕ್ತರು - 1
ನಿರ್ದೇಶಕರು (ಪ್ರಾ. ಪ್ರೌಢ) - 2
2) ಜಂಟಿ ನಿರ್ದೇಶಕರವರ ಕಛೇರಿ - 1
3) ಉಪ ನಿರ್ದೇಶಕರ ಕಛೇರಿ - 3
4) ಸಹಾಯಕ ಶಿಕ್ಷಣಾಧಿಕಾರಿ ಕಛೇರಿ - 6

ಆ) ಎರಡು

ಇ) ವರ್ಷಕ್ಕೆ ಒಟ್ಟು 2,52,084-00 ರೂ.ಗಳು

ಈ) ಹೌದು

ಶಿಕ್ಷಕರ ಕಲ್ಯಾಣನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಗೆ ಈ ಭವನವನ್ನು ಕಟ್ಟಲು ಪರವಾನಿಗೆ ನೀಡಿದೆ.

ಉ) ರೂ. 6.00 ಕೋಟಿಗಳು

ಊ) ಇನ್ನೂ ಪ್ರಾರಂಭಿಸಲಾಗಿಲ್ಲ.

ಋ) ಅಂದಾಜು 2 ವರ್ಷಗಳ ಕಾಲಾವಧಿ ಬೇಕಾಗುವುದು.

ೠ) ಸರ್ಕಾರದ ವತಿಯಿಂದ ಒದಗಿಸಲಾಗಿರುವುದಿಲ್ಲ, ಶಿಕ್ಷಕರ ಕಲ್ಯಾಣ ನಿಧಿಯ ಮೂಲಕ ಕಟ್ಟಡ ನಿರ್ಮಾಣ ಕಾರ್ಯಕ್ರಮ ನಡೆಸಲಾಗುತ್ತಿದೆ.

ಪಶುಸಂಗೋಪನೆ ಇಲಾಖೆಯಲ್ಲಿ ಜನವರಿ 1993ರಿಂದ ಭರ್ತಿ ಮಾಡಿರುವ ಹುದ್ದೆಗಳ ಸಂಖ್ಯೆ ಕುರಿತು

142 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 1993ರಿಂದ ಡಿಸೆಂಬರ್ ಅಂತ್ಯದವರೆಗೆ ಪಶುಸಂಗೋಪನಾ ಇಲಾಖೆಯಲ್ಲಿ ಬಡ್ತಿ ಮಾಡಿರುವ ವಿವಿಧ ಹುದ್ದೆಗಳೆಷ್ಟು ;

ಆ) ಆ ಹುದ್ದೆಗಳನ್ನು ಬಡ್ತಿ ಮಾಡಲು ಉದ್ಯೋಗ ವಿನಿಮಯ ಕೇಂದ್ರಗಳಿಂದ ಹಾಗೂ ಜಾಹೀರಾತು ಮೂಲಕ ಅರ್ಜಿಗಳನ್ನು ಕರೆಯಲಾಗಿತ್ತೆ;

ಇ) ಆ ಹುದ್ದೆಗಳಿಗೆ ಬಡ್ತಿ ನೀಡಲು ಸಮಿತಿಗಳನ್ನು ರಚಿಸಲಾಗಿತ್ತೆ ;

ಈ) ಇಲ್ಲದಿದ್ದಲ್ಲಿ ಯಾವ ಆಧಾರದ ಮೇಲೆ ಈ ನೇಮಕಾತಿಗಳನ್ನು ಮಾಡಿಕೊಳ್ಳಲಾಗಿದೆ;

ಉ) ಇವುಗಳ ಪೈಕಿ ಎಷ್ಟು ಹುದ್ದೆಗಳನ್ನು ಪರಿಶಿಷ್ಟ ಜಾತಿ, ಪಂಗಡದವರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ನೀಡಲಾಗಿದೆ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 449

ಆ) ಇಲ್ಲ.

ಇ) ಹೌದು.

ಈ) ಉದ್ಭವಿಸುವುದಿಲ್ಲ.

ಉ) 1) ಪರಿಶಿಷ್ಟ ಜಾತಿ : 168
2) ಪರಿಶಿಷ್ಟ ಪಂಗಡ : 31
3) ಹಿಂದುಳಿದ ವರ್ಗ : ಅನ್ವಯಿಸುವುದಿಲ್ಲ.

ಹಾಸನದ ಹಾಲಿನ ಡೈರಿಯಲ್ಲಿ ಆಗಿರುವ ನಷ್ಟ

143 -ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳಿನರಸೀಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದ ಹಾಲಿನ ಡೈರಿಯು ಯಾವಾಗ ಪ್ರಾರಂಭವಾಯಿತು;

ಆ) ಕಳೆದ 5 ವರ್ಷಗಳಿಂದ ಲಾಭ ಅಥವಾ ನಷ್ಟದಲ್ಲಿ ನಡೆದಿದೆಯೇ; (ಪೂರ್ಣ ವಿವರ ನೀಡುವುದು);

ಇ) ಈ ಡೈರಿಯು ನಷ್ಟದಲ್ಲಿ ನಡೆಯುತ್ತಿದ್ದರೆ ಅದಕ್ಕೆ ಕಾರಣಗಳೇನು;

ಈ) ಈ ಡೈರಿಯ ನಿರ್ವಹಣೆಯಲ್ಲಿ ಆಡಳಿತ ಮಂಡಳಿಯಿಂದ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) 1993-94ರಲ್ಲಿ ಈ ಡೈರಿಯ ಅಭಿವೃದ್ಧಿಗಾಗಿ ಸರ್ಕಾರ ಏನಾದರೂ ನೆರವು ನೀಡಿದೆಯೇ?

ಶ್ರೀ ಕೆ.ಎನ್ ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಅಕ್ಟೋಬರ್ 1983

ಆ)

ವರ್ಷ	ಲಾಭ (+) (ಲಕ್ಷಗಳಲ್ಲಿ) ಲಾಭ:ನಷ್ಟ	ನಷ್ಟ (-) ತಾತ್ಕಾಲಿಕ ತ:ಖ್ತೆ ಪ್ರಕಾರ
1988-89	(-)	43.62
1989-90	(-)	43.05
1990-91	(-)	32.03
1991-92	(+)	10.12
1992-93	(-)	80.14

ಇ) 1) ಶೇಖರಣೆಯಾದ ಇಡೀ ಹಾಲಿಗೆ ಸರಿಯಾದ ಮಾರುಕಟ್ಟೆ ಇಲ್ಲದೇ ಇರುವುದು.

2) ಹೆಚ್ಚುವರಿ ಹಾಲನ್ನು ಪರಿವರ್ತನೆ ಮಾಡುವುದರಿಂದ.